ಅಧ್ಯಕ್ಷರು: ಈಗ ಮಾನ್ಯ ಮುಖ್ಯಮಂತ್ರಿಯವರಿಂದ ಪ್ರಕಟಣೆ.

5. ಪ್ರಕಟಣೆ.

ವಿಷಯ: ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2 ರ ಮುಂದುವರೆದ ವರದಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):

1. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–Iರಲ್ಲಿ ಕರ್ನಾಟಕ ರಾಜ್ಯಕ್ಕೆ ಒಟ್ಟು 734 ಟಿಎಂಸಿ ನೀರಿನ ಪ್ರಮಾಣವು ಹಂಚಿಕೆಯಾಗಿದೆ.

2. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–IIರ ದಿನಾಂಕ: 30.12.2010ರ ಆದೇಶದಲ್ಲಿ ರಾಜ್ಯಕ್ಕೆ ಹೆಚ್ಚುವರಿ ನೀರನ್ನು ಹಂಚಿಕೆ ಮಾಡಿದ್ದು ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–I ಮಾಡಿದ್ದ ಹಂಚಿಕೆಯಲ್ಲಿ ಬದಲಾವಣೆ ಮಾಡಿರುವುದಿಲ್ಲ. ಸದರಿ ಆದೇಶದಲ್ಲಿ ಶೇಕಡ 65ರ ಅವಲಂಬನೆಯಲ್ಲಿ 65 ಟಿಎಂಸಿ ಹಾಗೂ ಸರಾಸರಿ ಅವಲಂಬನೆಯಲ್ಲಿ 105 ಟಿಎಂಸಿ ನೀರನ್ನು ರಾಜ್ಯಕ್ಕೆ ಹಂಚಿಕೆ ಮಾಡಿದೆ. ಒಟ್ಟಾರೆ 177 ಟಿಎಂಸಿ ಹೆಚ್ಚುವರಿ ನೀರಿನ ಹಂಚಿಕೆ ಮಾಡಲಾಗಿತ್ತು. ಇದರಿಂದಾಗಿ ಕರ್ನಾಟಕ ರಾಜ್ಯಕ್ಕೆ ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–I ಮತ್ತು IIರಿಂದ ಒಟ್ಟು 911 ಟಿಎಂಸಿ ನೀರಿನ ಹಂಚಿಕೆಯಾಗಿತ್ತು.

3. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–IIರ ತೀರ್ಪಿನ ನಂತರ ಅಂತರ ರಾಜ್ಯ ಜಲ ವಿವಾದ ಕಾಯ್ದೆ ಸೆಕ್ಷನ್ 5(3)ರಡಿಯಲ್ಲಿ ಮೂರು ಕಣಿವೆ ರಾಜ್ಯಗಳು ಸ್ಪಷ್ಟೀಕರಣಗಳನ್ನು ಕೋರಿ ಪರಿಶೀಲನಾ ಅರ್ಜಿಯನ್ನು ನ್ಯಾಯಾಧೀಕರಣದ ಮುಂದೆ ಸಲ್ಲಿಸಿದ್ದವು.

4. ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–IIರ ದಿನಾಂಕ:29.11.2013ರಂದು ಮೂರು ಸಂಪುಟಗಳಲ್ಲಿ ಮುಂದುವರೆದ ವರದಿಯನ್ನು ನೀಡಿದೆ. ಸದರಿ ತೀರ್ಪಿನಲ್ಲಿ ಈ ಮೊದಲು ಕರ್ನಾಟಕ ರಾಜ್ಯಕ್ಕೆ ಮಾಡಿದ್ದ ನೀರಿನ ಪ್ರಮಾಣದಲ್ಲಿ 4 ಟಿಎಂಸಿ ನೀರಿನ ಪ್ರಮಾಣವನ್ನು ಕಡಿಮೆಗೊಳಿಸಿದೆ, ಇದರಿಂದಾಗಿ ರಾಜ್ಯಕ್ಕೆ ನಿವ್ವಳ 907 ಟಿಎಂಸಿ ನೀರಿನ ಪ್ರಮಾಣವು ಹಂಚಿಕೆಯಾಗಿದೆ.

5. ರಾಜ್ಯಗಳಿಗೆ ಸರಾಸರಿ ಆಧಾರದ ಮೇಲೆ ಮತ್ತು ಶೇಖಡ 65ರ ಅವಲಂಬನೆ ಆಧಾರದ ಮೇಲೆ ಹಂಚಿಕೆ ಮಾಡಿರುವ ನೀರಿನ ಪ್ರಮಾಣವನ್ನು ಬಳಸಿಕೊಳ್ಳಲು ನ್ಯಾಯಾಧೀಕರಣವು Clause-IX-Aರಡಿಯಲ್ಲಿ manner of withdrawal ಸೂತ್ರವನ್ನು ರೂಪಿಸಿರುತ್ತದೆ.

6. ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524.256 ಮೀ. ವರೆಗೆ ಎತ್ತರಿಸಿ ಕೃಷ್ಣಾ ಜಲ ವಿವಾದ ನಾಯಾಧೀಕರಣ–IIರ ಹಂಚಿಕೆ ಮಾಡಿರುವ ನೀರಿನ ಪ್ರಮಾಣವನ್ನು ಉಪಯೋಗಿಸಿಕೊಳ್ಳುವ ರಾಜ್ಯದ ಹಕ್ಕು ಸ್ಥಾಪಿಸುವುದು ಆದ್ಯತೆಯ ಕ್ರಮವಾಗಿರುತ್ತದೆ.

7. ಮುಂದುವರೆದ ತೀರ್ಪು ಬಂದ ನಂತರ ರಾಜ್ಯ ಸರ್ಕಾರವು ಕಾನೂನು ಮತ್ತು ತಾಂತ್ರಿಕ ಪರಿಣಿತರೊಂದಿಗೆ ಸತತವಾಗಿ ಸಮಾಲೋಚನೆ ನಡೆಸಿದೆ

   - ಈ ದಿಸೆಯಲ್ಲಿ ಉಭಯ ಸದನಗಳ ಮುಖಂಡರುಗಳು ಹಾಗೂ ಹಿಂದಿನ ಜಲ ಸಂಪನ್ಮೂಲ ಸಚಿವರೊಂದಿಗೆ ದಿನಾಂಕ:08.01.2014ರಂದು ಸಭೆ ನಡೆಸಲಾಗಿದೆ. ಸದರಿ ಸಭೆಯಲ್ಲಿ ಉಭಯ ಸದನಗಳ ಮುಖಂಡರು ಅವರುಗಳ ಅಭಿಪ್ರಾಯ ಹಾಗೂ ಸಲಹೆಗಳನ್ನು ನೀಡಿರುತ್ತಾರೆ. ಸದರಿ ಸಭೆಯಲ್ಲಿ ನ್ಯಾಯಾಧೀಕರಣದ ಮುಂದುವರೆದ ವರದಿ

ಅಂಶಗಳ ಬಗ್ಗೆ ಮುಂದಿನ ಕಾನೂನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ ಕುರಿತು ಶ್ರೀ ಎಫ್.ಎಸ್.ನಾರಿಮನ್, ಹಿರಿಯ ವಕೀಲರು ಇವರೊಂದಿಗೆ ಸಮಾಲೋಚಿಸಲು ನಿರ್ಧರಿಸಲಾಯಿತು.

- ಅದರಂತೆ, ಸಚಿವ ಸಂಪುಟದ ಸಹೋದ್ಯೋಗಿಗಳೊಂದಿಗೆ ದಿನಾಂಕ:09-01-2014ರಂದು ಶ್ರೀ ಎಫ್.ಎಸ್.ನಾರಿಮನ್, ಹಿರಿಯ ವಕೀಲರೊಂದಿಗೆ ಸಮಾಲೋಚನೆ ನಡೆಸಲಾಗಿದೆ. ದಿನಾಂಕ:29.11.2013ರ ನ್ಯಾಯಾಧೀಕರಣದ ಮುಂದುವರೆದ ವರದಿಯ ಕೆಲವು ಅಂಶಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಸ್ಪೆಶಲ್ ಲೀವ್ ಪೆಟಿಶನ್ ದಾಖಲಿಸಲು ಹಿರಿಯ ವಕೀಲರು ಸಲಹೆ ಮಾಡಿರುತ್ತಾರೆ.

- ಜಲ ಸಂಪನ್ಮೂಲ ಸಚಿವರು ದಿನಾಂಕ:07.02.2014 ರಂದು ನವದೆಹಲಿಯಲ್ಲಿ ಕಾನೂನು ಮತ್ತು ತಾಂತ್ರಿಕ ತಂಡದೊಂದಿಗೆ ಸಮಾಲೋಚನೆ ನಡೆಸಿರುತ್ತಾರೆ ಹಾಗೂ ದಿನಾಂಕ:14.02.2014ರಂದು ಬೆಂಗಳೂರಿನಲ್ಲಿ ಕೃಷ್ಣಾ ಕಣಿವೆಯ ಕೆಲವು ಜಿಲ್ಲೆಗಳ ಶಾಸಕರೊಂದಿಗೆ, ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚೆ ನಡೆಸಿರುತ್ತಾರೆ. ಸದರಿ ಸಭೆಯಲ್ಲಿ ಉಪಸ್ಥಿತರಿದ್ದ ಜನಪ್ರತಿನಿಧಿಗಳು ಮುಂದುವರೆದ ವರದಿಯಲ್ಲಿನ ಹಲವಾರು ಅಂಶಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

8. ಮೇಲ್ಕಂಡ ಎಲ್ಲಾ ವಿಷಯಗಳನ್ನು ಪರಿಗಣಿಸಿ, ರಾಜ್ಯದ ಹಿತ ಕಾಪಾಡುವ ದೃಷ್ಟಿಯಿಂದ, ದಿನಾಂಕ:29.11.2013ರ ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣದ ಮುಂದುವರೆದ ವರದಿಯಲ್ಲಿ ನೀಡಿರುವ ಕೆಲವು ಸ್ಪಷ್ಟೀಕರಣಗಳು ಹಾಗೂ ಮಾರ್ಪಾಟುಗಳ ಇತರೆ ಸಂಬಂಧಿಸಿದ ಅಂಶಗಳ ಬಗ್ಗೆ ಸರ್ವೋಚ್ಚ

ನ್ಯಾಯಾಲಯದಲ್ಲಿ ವಿಶೇಷ ಅನುಮತಿ ಅರ್ಜಿಯನ್ನು ಸಲ್ಲಿಸಲು ಸರ್ಕಾರವು ನಿರ್ಧರಿಸಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಿನ್ನೆ ನಮ್ಮ ವಿರೋಧ ಪಕ್ಷದ ನಾಯಕರು ಈ ವಿಷಯ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಇನ್ನು ಈ ವಿಷಯದ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕೆನ್ನುವುದು ನಮ್ಮೆಲ್ಲರ ಅಭಿಪ್ರಾಯವಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ತಾವು ಇದುವರೆವಿಗೆ ಏನೇನು ಕ್ರಮ ಕೈಗೊಂಡಿದ್ದೀರಿ ಎನ್ನುವ ಮಾಹಿತಿಯನ್ನು ತಾವು ಈ ಸದನಕ್ಕೆ ತಿಳಿಸಿದ್ದೀರಿ. ಆದರೆ, ಈ ವಿಷಯ ಕುರಿತಂತೆ ಇನ್ನು ಅನೇಕ ಸಲಹೆ ಸೂಚನೆಗಳನ್ನು ಈ ವಿಚಾರದಲ್ಲಿ ಸರ್ಕಾರಕ್ಕೆ ಕೊಡುವುದು ಅಗತ್ಯತೆ ಇದೆ ಎಂದು ನಮ್ಮ ನಾಯಕರು ಪ್ರಸ್ತಾಪಿಸಿದ್ದಾರೆ. ಹೀಗಾಗಿ ತಾವು ಇದಕ್ಕೆ ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಬೇರೆ ಬೇರೆ ರೀತಿಯಲ್ಲಿ ನಾವು ಇದನ್ನು ಪ್ರಸ್ತಾಪಿಸುತ್ತೇವೆ, ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : legal team ಜೊತೆಗೆ ಚರ್ಚೆ ಮಾಡಿದ್ದೇವೆ. ಈಗ Special Leave Petition ನ್ನು ಮೂರು ತಿಂಗಳೊಳಗೆ ಹಾಕಬೇಕು. ಅದಕ್ಕೋಸ್ಕರ ಸದನದ ಗಮನಕ್ಕೆ ತಂದು ಇದನ್ನು ಮಾಡಬೇಕೆನ್ನುವ ತೀರ್ಮಾನ ಮಾಡಿದ್ದೇವೆ, ಇದನ್ನು ಸದನದ ಗಮನಕ್ಕೆ ತಂದಿದ್ದೇವೆ. ಚರ್ಚೆ ಮಾಡುವುದಾದರೆ ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಿ.

ಅಧ್ಯಕ್ಷರು: O.k.ಮಾಡೋಣ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ,

ಅಧ್ಯಕ್ಷರು : ಚರ್ಚೆ ಬೇಡ, ನೀವು ಹೇಳಿ.

ಶ್ರೀ ಸಿದ್ದರಾಮಯ್ಯ : ಇದಕ್ಕೇನು ಚರ್ಚೆ ಬೇಕಾಗಿಲ್ಲ.

ಅಧ್ಯಕ್ಷರು : Statement ಬಗ್ಗೆ ಚರ್ಚೆ ಬೇಡ.

ಶ್ರೀ ಹೆಚ್. ಡಿ. ರೇವಣ್ಣ: ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಬಜೆಟ್ ಮೇಲೆ ಮಾತನಾಡುವಾಗ ಈ ಬಗ್ಗೆಯೂ ಚರ್ಚೆ ಮಾಡಿ. ಅದರಲ್ಲಿಯೂ ಇದನ್ನು ಮಾತನಾಡಬಹುದು.

ಶ್ರೀ ಹೆಚ್. ಡಿ. ರೇವಣ್ಣ: ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಕಾವೇರಿ ಮತ್ತು ಕೃಷ್ಣಾದ ಬಗ್ಗೆ ಚರ್ಚೆ ಮಾಡಲು ಸದನದಲ್ಲಿ ಅವಕಾಶ ಮಾಡಿ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :ಬಜೆಟ್ ಮೇಲೆ ಮಾತನಾಡುವಾಗ ಏನು ಬೇಕಾದರೂ ಮಾತನಾಡಬಹುದು ಅಲ್ಲವೇ?

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ರೂಲ್ 69 ನಲ್ಲಿ ನಾವು ಇದೇ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೇಳಿದ್ದೆವು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು Statement ಮಾಡಿದ್ದಾರೆ, ಈ ಸಂದರ್ಭದಲ್ಲಿ ನಾವು ರೂಲ್ 69 ನಲ್ಲಿಯೂ ಇದೇ ವಿಷಯದ ಬಗ್ಗೆ ಕೊಟ್ಟಿದ್ದೇವೆ.

ಅಧ್ಯಕ್ಷರು : ಬೇಡ ಬೇಡ, ನಿಮಗೆ ಬೇರೆ ಬರುತ್ತದೆ, ಆಗ ಮಾತನಾಡಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಈಗ ಚರ್ಚೆಗೆ ಒಂದರ್ಧ ಗಂಟೆ ಕಾಲ ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ. ಈಗ ನಾವು ಎಲ್ಲರೂ ಇಲ್ಲಿಯೇ ಇದ್ದೇವೆ. ನಾವು ಮಾತನಾಡಿ ನಮ್ಮ ಸಲಹೆ ಏನು ಎಂಬುದನ್ನು ಹೇಳುತ್ತೇವೆ.

ಅಧ್ಯಕ್ಷರು : ಅಜೆಂಡಾದಲ್ಲಿ ನಿಮ್ಮ ವಿಷಯ ಇದೆ. ಆಗ ಬರುತ್ತೆ. ಏಕೆ ಗಡಿಬಿಡಿ ಮಾಡುತ್ತೀರಿ?

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಈಗ ತಾವೊಂದು ಅರ್ಧ ಗಂಟೆ ಕಾಲ ಅವಕಾಶ ಕೊಟ್ಟರೆ ಸಲಹೆ ನೀಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ.

ಅಧ್ಯಕ್ಷರು : ಇಂದಿನ ಅಜೆಂಡಾದಲ್ಲಿ ನಿಮ್ಮ ವಿಷಯ ಇದೆ ಅದು ಬರುತ್ತದೆ, ಸ್ವಲ್ಪ ತಾಳಿ. ಅಜೆಂಡಾದಲ್ಲಿ ಹಾಕಿರುವುದು ಆ ಕಾರಣಕ್ಕಾಗಿ, ನಿಮಗೂ ಅವಕಾಶ ಕೊಡುತ್ತೇವೆ, ಸ್ವಲ್ಪ ತಾಳಿ. ನೀವು ಹೇಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ನಾವು ಅಜೆಂಡಾ ಪ್ರಕಾರವೇ ಕೇಳುತ್ತಿದ್ದೇವೆ.

ಅಧ್ಯಕ್ಷರು : ಕೊಡುತ್ತೇವೆ ಸ್ವಲ್ಪ ತಾಳಿ. ದಯವಿಟ್ಟು ಕುಳಿತುಕೊಳ್ಳಿ. ನೀವು ಹೇಳಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ತಾವು ನಮಗೆ ಯಾವಾಗ ಕೊಡುತ್ತೀರಿ?

ಅಧ್ಯಕ್ಷರು: ಸ್ವಾಮಿ, ಮೊದಲು ಬಜೆಟ್ ಮೇಲೆ ಚರ್ಚೆಯಾಗಲಿ. ಕೊನೆಯ ಒಂದು ಗಂಟೆಯ ಅವಧಿಯಲ್ಲಿ ರೂಲ್ 69ನಲ್ಲಿ ಎರಡು ವಿಷಯಗಳಿವೆ. ನಿಮಗೆ ಆಗ ಅವಕಾಶ ಕೊಡುತ್ತೇನೆ. ತಾವು ಕುಳಿತುಕೊಳ್ಳಿ. ಏಕೆ ಗಡಿಬಿಡಿ ಮಾಡುತ್ತೀರಿ? ಜಗದೀಶ್‌ರವರೆ, ತಾವು ಅರ್ಧಗಂಟೆಯಲ್ಲಿ ಮುಗಿಸಬೇಕು.

6. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಆಯವ್ಯಯ ಭಾಷಣದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಆರ್. ಜಗದೀಶ್ ಕುಮಾರ್ (ಹೆಬ್ಬಾಳ) : ಮಾನ್ಯ ಅಧ್ಯಕ್ಷರೆ, ತಾವು ನನಗೆ 2014–15 ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಅದಕ್ಕಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮೊದಲನೆಯದಾಗಿ ಒಂದು ಒಳ್ಳೆಯ ಕ್ರಮವನ್ನು ಮಾನ್ಯ ರೇಷ್ಮೆ ಮಂತ್ರಿಗಳು ತೆಗೆದುಕೊಂಡಿದ್ದಾರೆ. Sericulture Department to be merged with Agriculture Department ಇದು ಬಹಳ ಒಳ್ಳೆಯ ಕ್ರಮ. ಅದೇ ರೀತಿಯಾಗಿ ನಾನು ಈ ಬಜೆಟ್ ಪುಸ್ತಕ ನೋಡುತ್ತಿರುವ ಸಂದರ್ಭದಲ್ಲಿ ಅತಿ